ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ (ಅವತರಣಿಕೆಗಳು) ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೆ, ೧೯೮೫ನೇ ಇಸವಿಯ ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, '೧೯೮೫ನೇ ಇಸವಿಯ ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು.

PRESENTATION OF REPORT

SRI J. A. FERNANDES.—Sir, I present the Second Report of the Committee on Private Members' Bills and Resolutions.

SRI R. RAMAJAH.—Sir, I Move :

"That the House agrees with the Second Report of the Committee on Private Members' Bills and resolutions"

MR. SPEAKER.—The report presented and agreed to by the House.

ಮಂತ್ರಿಯವರ ಹೇಳಿಕೆ

ಮೈಸೂರು ನಗರದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಎನ್ನುವ ಹೆಣ್ಣು ಮಗಳಿಗೆ ಗಂಡ ಮತ್ತು ಅತ್ತೆ ಇಬ್ಬರೂ ಸೇರಿಕೊಂಡು ಕಿರುಕುಳ ಕೊಟ್ಟಿರುವ ಬಗ್ಗೆ

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನಪತ್ರಿಕೆಯ ಮಾನ್ಯ ಭೂಪತಿಯವರು ಕೊಟ್ಟಿರುವ ಸೂಚನೆಗೆ ಹೇಳಿಕೆ ಈ ರೀತಿ ಇದೆ :

"ನಾರಾಯಣಸ್ವಾಮಿ ಅವರ ಪತ್ನಿ ಶ್ರೀಮತಿ ವಿಜಯಲಕ್ಷ್ಮಿ ಎಂಬುವರು ದಿನಾಂಕ ೩೦-೭-೧೯೫೫ರಂದು ಮಧ್ಯಾಹ್ನ ೧೨-೩೦, ೧-೦೦ ಗಂಟೆ ಸುಮಾರಿಗೆ ಟೀ ಮಾಡಲು ಹೋಗಿ ಬೆಂಕಿ ಹಚ್ಚಿಕೊಂಡರೆಂದೂ ಆಕೆಯನ್ನು ಕಾಪಾಡಲು ಹೋಗಿ ಆಕೆಯ ಪತಿ ಕೈ ಸುಟ್ಟುಕೊಂಡರೆಂದೂ, ನಂತರ ೧-೨೦ ಗಂಟೆಯ ವೇಳೆಗೆ ಆಕೆಯನ್ನು ಕೆ. ಆರ್. ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲಾಯಿತೆಂದೂ ವರದಿಯಾಗಿದೆ. ಸುಮಾರು ೫-೩೦ ಗಂಟೆ ಸುಮಾರಿಗೆ ನಜರಾಬಾದ್ ಪೋಲೀಸ್ ಠಾಣೆಯಲ್ಲಿ ಆಕೆಯ ತಮ್ಮ ಶ್ರೀ ರಾಮಚಂದ್ರ ಎಂಬುವನು ಆಕೆಯ ಸ್ಥಿತಿಗೆ ಆಕೆಯ ಅತ್ತೆ ಮತ್ತು ಆಕೆಯ ಗಂಡನೇ ಕಾರಣವೆಂದು

ತೊಟ್ಟ ದೂರನ್ನು ಸಬ್ ಇನ್ಸ್‌ಪೆಕ್ಟರ್‌ರವರು ಭಾರತೀಯ ದಂಡ ಸಂಹಿತೆ ಕಲಂ ೪೯೮-ಎ ಅಪರಾಧ ಸಂಖ್ಯೆ ೧೫೩/೮೫ ಎಂದು ಒಂದು ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿದ್ದಾರೆ. ಶ್ರೀಮತಿ ವಿಜಯಲಕ್ಷ್ಮಿಯವರು ಆಸ್ಪತ್ರೆಯಲ್ಲಿ ತನ್ನ ಸ್ಥಿತಿಗೆ ತನ್ನ ಅತ್ತೆಯವರು ಕೊಡುತ್ತಿದ್ದ ಕಿರುಕುಳವೇ ಕಾರಣವೆಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ತನಿಖೆಯು ಮುಂದುವರಿಯುತ್ತಿದೆ. ಈ ಮೊಕದ್ದಮೆಯನ್ನು ಸಿ.ಓ.ಡಿ.ಗೆ ಒಪ್ಪಿಸಲಾಗುವುದು.''

ಖಾಸಗಿ ಕಾರ್ಯಕಲಾಪ

ಅಧ್ಯಕ್ಷರು.—ಈ ಖಾಸಗಿ ಕಾರ್ಯಕಲಾಪವನ್ನು ಮುಂದಿನವಾರ ತೆಗೆದುಕೊಳ್ಳೋಣ. ಈಗ ಸಭೆಯು ಮೇಲಿದ್ದು ಪುನಃ ದಿನಾಂಕ ೫ನೇ ಆಗಸ್ಟ್ ೧೯೮೫ರಂದು ಬೆಳಿಗ್ಗೆ ೧೧.೦೦ ಗಂಟೆಗೆ ಸೇರುವುದು. ಎಲ್ಲರಿಗೂ ಧನ್ಯವಾದಗಳು.

(ಸಭೆಯು ೬ ಗಂಟೆ ೩೫ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೫ನೇ ಆಗಸ್ಟ್ ೧೯೮೫ರ ಸೋಮವಾರ ಬೆಳಿಗ್ಗೆ ೧೧–೦೦ ಗಂಟೆಗೆ ಸೇರಲು ನಿಶ್ಚಯಿಸಲಾಯಿತು)